ವಿಷಯ: ಬ್ಲಡ್ ಬ್ಯಾಂಕ್ ಇಲ್ಲದ ಕಡೆ ರಕ್ತ ನೀಡುವ ವ್ಯವಸ್ಥೆ

2442 (3189)

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಕ್ತ ಅಗತ್ಯವಿರುವ ರೋಗಿಗಳಿಗೆ ಇತ್ತೀಚಿನ ಸುಪ್ರೀಂಕೋರ್ಟು ತೀರ್ಪಿನಿಂದಾಗಿ, ಸುಸಜ್ಜಿತ ಬ್ಲಡ್ ಬ್ಯಾಂಕ್ ವ್ಯವಸ್ಥೆ ಇಲ್ಲದ ಕಡೆ ರಕ್ತ ನೀಡಲು ತೊಂದರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ತಾಲ್ಲೂಕು ಮಟ್ಟದ ಸರ್ಕಾರಿ ಆಸ್ಪತ್ರೆಗಳಲ್ಲಿ ತುರ್ತು ಚಿಕಿತ್ಸೆಯ ರೋಗಿಗಳಿಗೆ ರಕ್ತದ ಅವಶ್ಯಕತೆ ಇದ್ದಲ್ಲಿ ರಕ್ತದಾನಿಗಳಿಂದ ರಕ್ತ ಪಡೆಯಲು ಇರುವ ಕಾನೂನಿನ ತೊಡಕನ್ನು ನಿವಾರಿಸಲು ಸರ್ಕಾರವು ಏನು ಕ್ರಮ ಕೈಗೊಂಡಿದೆ;

ಡಾ: ಹೆಚ್.ಸಿ.ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಬಂದಿದೆ.

ಆ) ಒಟ್ಟಾರೆ ರಾಜ್ಯದಲ್ಲಿ ಸರ್ಕಾರಿ, ಸ್ವಾಯತ್ತ ಸಂಸ್ಥೆ ಮತ್ತು ಖಾಸಗಿಕ್ಷೇತ್ರಗಳಲ್ಲಿ ಪರವಾನಗಿ ಪಡೆದ ರಕ್ತನಿಧಿಗಳ ಸಂಖ್ಯೆ: 69. ಇವೆಲ್ಲವೂ ಕಾರ್ಯನಿರ್ವಹಿಸುತ್ತಿರುವ ರಕ್ತನಿಧಿಗಳಾಗಿವೆ. ಇನ್ನೂ 12 ರಕ್ತನಿಧಿಗಳನ್ನು ಸ್ಥಾಪಿಸಲು ಕ್ರಮಕೈಗೊಳ್ಳಲಾಗುತ್ತಿದೆ. ತಾಲ್ಲೂಕು ಆಸ್ಪತ್ರೆಗಳಲ್ಲಿ ಬೇಕಾಗುವ ರಕ್ತವನ್ನು ಹತ್ತಿರದ ಜಿಲ್ಲಾ ರಕ್ತನಿಧಿಗಳಿಂದ ಸದ್ಯಕ್ಕೆ ಪಡೆಯಲಾಗುತ್ತಿದೆ. ಕ್ರಮೇಣ ತಾಲ್ಲೂಕುಗಳಲ್ಲಿಯೂ ರಕ್ತನಿಧಿಗಳನ್ನು ಸ್ಥಾಪಿಸುವ ಪ್ರಸ್ತಾಪವು ಸರ್ಕಾರದ ಪರ್ಯಾಲೋಚನೆಯಲ್ಲಿದೆ.

ಔಷಧ ಮತ್ತು ಕಾಂತಿವರ್ಧಕ ಕಾಯ್ದೆ 1940 ರಡಿಯಲ್ಲಿ ನಿಯಮಾವಳಿಗಳನ್ನು ರೋಗಿಗಳ ಮತ್ತು ಸಾರ್ವಜನಿಕರ ಆರೋಗ್ಯ ಹಿತದೃಷ್ಟಿಯಿಂದ ರಚಿಸಲಾಗಿದ್ದು, ಇವುಗಳನ್ನು ಅನುಸರಿಸಿಯೇ ರಕ್ತ ನಿಧಿಗಳನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ವಿಷಯ: ತಾಲ್ಲೂಕು ಪಂಚಾಯಿತಿಗಳಿಗೆ ಅನುದಾನ ಬಿಡುಗಡೆ

2443 (3742)

ಶ್ರೀ ಎಚ್.ಸಿ.ಬಾಲಕೃಷ್ಣ (ಮಾಗಡಿ): ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ತಾಲ್ಲೂಕು ಪಂಚಾಯತಿಗಳು ಅನುಮೋದನೆ ನೀಡಿದ ಕಾಮಗಾರಿಗಳನ್ನು

ಕೈಗೊಳ್ಳಲು ಸರ್ಕಾರವು ನೇರವಾಗಿ ತಾಲ್ಲೂಕು ಪಂಚಾಯತಿಗಳಿಗೆ ಅನುದಾನವನ್ನು ನೀಡುವ ಪ್ರಸ್ತಾಪ ಸರ್ಕಾರದ ಪರಿಶೀಲನೆಯಲ್ಲಿದೆಯೇ?

ಆ. ಹಾಗಿದ್ದಲ್ಲಿ ಯಾವಾಗಿನಿಂದ ಈ ಕ್ರಮ ಕೈಗೊಳ್ಳಲಾಗುವುದು.

ಇ. ಹಾಗಿಲ್ಲದಿದ್ದಲ್ಲಿ ಅನುದಾನವನ್ನು ನೀಡುವ ವಿಧಾನ ಯಾವುದು?

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಸಚಿವರು):

ಅ. ತಾಲ್ಲೂಕು ಪಂಚಾಯತಿಗಳು ಅನುಮೋದನೆ ನೀಡಿದ ಕಾಮಗಾರಿಗಳನ್ನು ಕೈಗೊಳ್ಳಲು ಅನುದಾನವನ್ನು ಜಿಲ್ಲಾಪಂಚಾಯತಿ ಮುಖಾಂತರ ನೀಡುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಆ. 1997ನೇ ಅಕ್ಟೋಬರ್ ಮಾಹೆಯಿಂದ ಕ್ರಮ ಕೈಗೊಳ್ಳಲಾಗುವುದು.

ಇ. ಉದ್ಭವಿಸುವುದಿಲ್ಲ.

ವಿಷಯ: ಮಾಗಡಿ ತಾಲ್ಲೂಕಿನ ಸಾವನದುರ್ಗ ಅರಣ್ಯ ಪ್ರದೇಶದಲ್ಲಿ ಅಕ್ರಮವಾಗಿ ಬಿದಿರು ಬೊಂಬು ಮರ ಕಡಿದು ಸಾಗಾಣೆ

2444 (3743)

ಶ್ರೀ ಹೆಚ್.ಸಿ.ಬಾಲಕೃಷ್ಣ (ಮಾಗಡಿ): ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಾಗಡಿ ತಾಲ್ಲೂಕಿನ ಸಾವನದುರ್ಗ ಅರಣ್ಯ ಪ್ರದೇಶದಲ್ಲಿ ಅನಧಿಕೃತವಾಗಿ ಬಿದಿರು, ಬೊಂಬುಗಳನ್ನು ಹಾಗೂ ಮರಗಳನ್ನು ಕಡಿದು ಸಾಗಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹೀಗೆ ಅಕ್ರಮವಾಗಿ ಸಾಗಿಸಿದ ಅರಣ್ಯ ಸಂಪತ್ತಿನ ಒಟ್ಟು ಮೌಲ್ಯವೆಷ್ಟು?

ಇ) ಈ ಅಕ್ರಮ ಸಾಗಾಣಿಕೆಗೆ ಕಾರಣರಾದವರು ಯಾರು? ಇವರ ವಿರುದ್ಧ ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ ಸಚಿವರು):

ಅ) ಬಂದಿದೆ.

ಆ) ಕಳೆದ ದಿನಾಂಕ 1-4-95ರಿಂದ ಇಲ್ಲಿಯವರೆಗೆ ಸುಮಾರು ಒಂದು ಲಕ್ಷ ಐವತ್ತು